ಕರ್ನಾಟಕ ಸರ್ಕಾರ

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**

ಸಂಖ್ಯೆ: ಸಿ1/SSLC/ MPIC/ಸಭೆ/08/2019–20 ದಿನಾಂಕ: 21.06.2019

## ಜ್ಞಾಪನಾ

**ವಿಷಯ :–** 2019–20ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪ್ರಶ್ನೆಪತ್ರಿಕೆಯ ಸ್ವರೂಪದಲ್ಲಿ ಬದಲಾವಣೆ ಮಾಡುವಕುರಿತು.

*******

ಪ್ರತಿಯೊಂದು ಮಗುವಿನ ಜೀವನದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವು ಮಹತ್ವ ಪೂರ್ಣವಾಗಿದೆ. ಏಕೆಂದರೆ ಇದು ಉನ್ನತ ಶಿಕ್ಷಣಕ್ಕೆ ಭದ್ರ ಬುನಾದಿಯಾಗಿರುತ್ತದೆ. ಮೊದಲ ಹತ್ತು ವರ್ಷಗಳ ಔಪಚಾರಿಕ ಶಿಕ್ಷಣದ ಅಂತ್ಯದಲ್ಲಿ ವಿದ್ಯಾರ್ಥಿಗಳ ಕಲಿಕಾ ಅನುಭವಗಳನ್ನು ಮತ್ತು ಗುಣಾತ್ಮಕ ಕಲಿಕೆಯನ್ನು ಒರೆಗೆ ಹಚ್ಚುವ ಸಾಧನ ಪರೀಕ್ಷೆಯೇ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಾಗಿದೆ. ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಶಿಕ್ಷಣ ನೀತಿಗಳ ಆಶಯ, ಪಾಲಕರ ನಿರೀಕ್ಷೆಗಳು, ಶಿಕ್ಷಕರ ವೃತ್ತಿ ಬೆಳವಣಿಗೆ ಮತ್ತು ವಿದ್ಯಾಥಿಗಳ ಭೌದ್ಧಿಕ ಸಾಮರ್ಥ್ಯಗಳನ್ನು ಪ್ರತಿಬಿಂಬಿಸುತ್ತದೆ.

ರಾಜ್ಯದಲ್ಲಿ ಪ್ರತಿ ವರ್ಷವೂ ಸುಮಾರು ಎಂಟು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದು, ಈ ಪರೀಕ್ಷೆಯು ವಿದ್ಯಾರ್ಥಿಗಳ ಜೀವನದ ಮೈಲಿಗಲ್ಲಾಗಿದ್ದು, ಉನ್ನತ ಶಿಕ್ಷಣವನ್ನು ಗಳಿಸಲು, ವೃತ್ತಿ ಶಿಕ್ಷಣವನ್ನು ಪಡೆಯಲು, ಸ್ವಯಂ ಉದ್ಯೋಗವನ್ನು ಪ್ರಾರಂಭಿಸಲು ಅಲ್ಲದೇ ಜೀವನ ನಿರ್ವಹಣೆಗೂ ದಿಕ್ಸೂಚಿಯಾಗಿದೆ. ಆದ್ದರಿಂದ ಜನ ಸಮುದಾಯದಲ್ಲಿ, ಶಿಕ್ಷಕರಲ್ಲಿ, ವಿದ್ಯಾರ್ಥಿಗಳಲ್ಲಿ ಹಾಗೂ ಶಿಕ್ಷಣ ಇಲಾಖೆಯಲ್ಲಿ ಈ ಪರೀಕ್ಷೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇದು ಕಲಿಕಾ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾಗಿದ್ದು, ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಳಕೆಯಿಂದ ನವೀನ ಕಲಿಕಾ ವಾತಾವರಣ ನಿರ್ಮಾಣವಾಗುತ್ತಿದೆ. ಅಲ್ಲದೆ ವಿದ್ಯಾರ್ಥಿಗಳ ತಾರ್ಕಿಕ ಚಿಂತನ ಮಟ್ಟವೂ ಹೆಚ್ಚಾಗುತ್ತಿದ್ದು, ಪರೀಕ್ಷಾ ಪದ್ಧತಿಯಲ್ಲಿ ನಾವೀನ್ಯತೆ ಅತ್ಯಾವಶ್ಯಕವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ–2019 ದಾಖಲೆಯು ಇದೇ ತತ್ವವನ್ನು ಪ್ರತಿಪಾದಿಸುತ್ತದೆ. ಕೆ.ಎಸ್.ಇ.ಇ.ಬಿ. ವತಿಯಿಂದ ನಡೆಸಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಹಿಂದಿನ ಪ್ರಶ್ನೆಪತ್ರಿಕೆಗಳ ವಿಶ್ಲೇಷಣೆಯನ್ನು ಎ.ಪಿ.ಎಫ್ ವತಿಯಿಂದ ನಡೆಸಲಾಯಿತು. ಸದರಿ ಅಧ್ಯಯನದ ವರದಿಯಲ್ಲಿ ಪ್ರಶ್ನೆಪತ್ರಿಕೆಗಳ ಗುಣಮಟ್ಟವನ್ನು ಉತ್ತಮಪಡಿಸಲು ಕೆಲವು ಸಲಹೆಗಳನ್ನು ನೀಡಲಾಗಿರುತ್ತದೆ.

ಪರೀಕ್ಷೆಯಲ್ಲಿ ಪಾರದರ್ಶಕತೆಯನ್ನು ಅನುಷ್ಠಾನಗೊಳಿಸಲು ದಿನಪತ್ರಿಕೆ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ನಕಲು ಅವ್ಯವಹಾರಗಳ ಕುರಿತು ಪ್ರಕಟಗೊಳ್ಳುತ್ತಿರುವ ವರದಿಯನ್ನು ಮನಗಂಡು, ಕಠಿಣತೆಯ ಮಟ್ಟವನ್ನು ಯಥಾವತ್ತು ಮುಂದುವರೆಸಿ ಅಲ್ಪ ಪ್ರಮಾಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪ್ರಶ್ನೆಪತ್ರಿಕೆಯ ಸ್ವರೂಪದಲ್ಲಿ ಬದಲಾಯಿಸಲು ತೀರ್ಮಾನಿಸಿದೆ.

ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ವೃದ್ಧಿಸಲು, ಕಂಠಪಾಠ ಹಾಗೂ ಉರು ಹೊಡೆಯುವ ಪದ್ಧತಿಯನ್ನು ತಪ್ಪಿಸಿ ವಿದ್ಯಾರ್ಥಿಗಳಲ್ಲಿ ತಾರ್ಕಿಕ ಚಿಂತನೆಯನ್ನು ಬೆಳೆಸಲು ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, ಬಹು ಆಯ್ಕೆ ಪ್ರಶ್ನೆಗಳನ್ನು ಕಡಿಮೆ ಮಾಡಿ, ಅನ್ವಯ, ಕೌಶಲ್ಯ ಹಾಗೂ ವಿವರಣಾತ್ಮಕ ಹೊಂದಿರುವ ದೀರ್ಘಾವಧಿ ಪ್ರಶ್ನೆಗಳಿಗೆ ಆದ್ಯತೆ ನೀಡಿ, ಪ್ರಶ್ನೆಗಳ ಸಂಖ್ಯೆಗಳನ್ನು ಕಡಿಮೆ ಮಾಡಿ, ಕಠಿಣತೆಯ ಮಟ್ಟವನ್ನು ಎಲ್ಲಾ ವಿಷಯಗಳಲ್ಲೂ ಸಮಾನತೆ ರೂಪಿಸಿ, ಏಕರೂಪತರಲು ಮುಖ್ಯಾಂಶಾಧಾರಿತ / ವಿಷಯಾಧಾರಿತ(Theme based) ಅಂಕಗಳನ್ನು ಹಂಚಿಕೆ ಮಾಡಿ, ವಿಷಯವಾರು ಉದ್ದಿಷ್ಟಗಳು (Objectives), ಪಠ್ಯವಸ್ತು(Content), ಪ್ರಶ್ನೆಗಳ ಸ್ವರೂಪ(Type of Questions) ಇವುಗಳಿಗೆ ಒತ್ತು ನೀಡಿ ಕೆಳಕಂಡಂತೆ ವಿಷಯವಾರು ನೀಲನಕಾಶೆ ಹಾಗೂ ವಿಷಯವಾರು ಪ್ರಶ್ನೆಪತ್ರಿಕೆ ಹಾಗೂ ಅಂಕಗಳ ಹಂಚಿಕೆ ಸ್ವರೂಪದಕೋಷ್ಟಕವನ್ನು ಸಿದ್ಧಪಡಿಸಿ 2019–20ನೇ ಶೈಕ್ಷಣಿಕ ವರ್ಷದಿಂದ ಪ್ರಶ್ನೆಪತ್ರಿಕೆ ಸ್ವರೂಪದಲ್ಲಿ ಅಲ್ಪ ಬದಲಾವಣೆ ಮಾಡಲು ಆದೇಶಿಸಿದೆ.

## I. ಭಾಷಾವಾರು / ಕೋರ್ ವಿಷಯವಾರು ನೀಲನಕಾಶೆಗಳ ಕೋಷ್ಟಕ:

### 1ಎ. ಪ್ರಥಮ ಭಾಷೆಗಳು : ಕನ್ನಡ ಮತ್ತುಇತರೆ ಭಾಷೆಗಳ ನೀಲನಕಾಶೆ

| ಕ್ರ ಸಂ | ಜ್ಞಾನಗ್ರಹಣ ಮಟ್ಟಕ್ಕೆ ಅಂಕ ಹಂಚಿಕೆ<br>Weightage to Cognitive levels | | ಪಠ್ಯವಿಷಯಗಳಿಗೆ ಅಂಕ ಹಂಚಿಕೆ<br>Weightage to Content Type | |
|---|---|---|---|---|
| 1 | ಸ್ಮರಣೆ Remembering | 21% -<br>21ಅಂಕಗಳು | ಗದ್ಯ<br>Prose | 28%-<br>28 ಅಂಕಗಳು |
| 2 | ಅರ್ಥೈಸುವಿಕೆ<br>Comprehension | 36% -<br>36 ಅಂಕಗಳು | ಪದ್ಯ<br>Poetry | 30%-<br>30 ಅಂಕಗಳು |
| 3 | ಅಭಿವ್ಯಕ್ತಿ<br>Expression<br>Writing skills | 39% -<br>39 ಅಂಕಗಳು | Supplementary reading | 9% -<br>9 ಅಂಕಗಳು |
| 4 | ಮೆಚ್ಚುಗೆ/ಪ್ರಶಂಸುವಿಕೆ<br>Appreciation<br>ಬರವಣಿಗೆಕೌಶಲ್ಯ<br>Writing skills | 4% -<br>4 ಅಂಕಗಳು | ಅಪಠಿತ<br>Non-Detailed Text | 4% -<br>4 ಅಂಕಗಳು |
| | ಒಟ್ಟು<br>Total | 100 ಅಂಕಗಳು | Grammar &Vocabulary<br>ವ್ಯಾಕರಣ | 29% -<br>29ಅಂಕಗಳು |

## 1ಬಿ. ದ್ವಿತೀಯ ಭಾಷೆಗಳು : ಆಂಗ್ಲ ಮತ್ತು ಇತರೆ ಭಾಷೆಗಳ ನೀಲನಕಾಶೆ

| ಕ್ರ ಸಂ | ಜ್ಞಾನಗ್ರಹಣ ಮಟ್ಟಕ್ಕೆ ಅಂಕ ಹಂಚಿಕೆ Weightage to Cognitive levels | | ಪಠ್ಯವಿಷಯಗಳಿಗೆ ಅಂಕ ಹಂಚಿಕೆ Weightage to Content Type | |
|---|---|---|---|---|
| 1 | ಸ್ಮರಣೆ Remembering | 10%- 8 ಅಂಕಗಳು | Prose ಗದ್ಯ | 25%- 20 ಅಂಕಗಳು |
| 2 | ಅರ್ಥೈಸುವಿಕೆ Comprehension | 40%- 32 ಅಂಕಗಳು | Poetry ಪದ್ಯ | 20%- 16 ಅಂಕಗಳು |
| 3 | ಅಭಿವ್ಯಕ್ತಿ Expression ಬರವಣಿಗೆ ಕೌಶಲ್ಯ Writing skills | 45% - 36 ಅಂಕಗಳು | Supplementary reading | 5%- 4 ಅಂಕಗಳು |
| 4 | ಮೆಚ್ಚುಗೆ/ಪ್ರಶಂಸುವಿಕೆ Appreciation | 5% - 4 ಅಂಕಗಳು | Grammar and Vocabulary ವ್ಯಾಕರಣ | 20% - 16 ಅಂಕಗಳು |
| ಒಟ್ಟು Total | | 80 ಅಂಕಗಳು | Reading & Writing | 30%- 24 ಅಂಕಗಳು |
| | | | ಒಟ್ಟು Total | 80 ಅಂಕಗಳು |

## 1ಸಿ. ತೃತೀಯ ಭಾಷೆಗಳು : ಹಿಂದಿ ಮತ್ತು ಇತರೆ ಭಾಷೆಗಳ ನೀಲನಕಾಶೆ

| ಕ್ರ ಸಂ | ಜ್ಞಾನಗ್ರಹಣ ಮಟ್ಟಕ್ಕೆ ಅಂಕ ಹಂಚಿಕೆ Weightage to Cognitive levels | | ಪಠ್ಯವಿಷಯಗಳಿಗೆ ಅಂಕ ಹಂಚಿಕೆ Weightage to Content Type | |
|---|---|---|---|---|
| 1 | ಸ್ಮರಣೆ Remembering | 20%- 16 ಅಂಕಗಳು | ಗದ್ಯ Prose | 41.25 % ಅಂಕಗಳು-33 |
| 2 | ಅರ್ಥೈಸುವಿಕೆ Comprehension | 28.75%- 23 ಅಂಕಗಳು | ಪದ್ಯ Poetry | 25% ಅಂಕಗಳು -20 |
| 3 | ಅಭಿವ್ಯಕ್ತಿ Expression ಬರವಣಿಗೆ ಕೌಶಲ್ಯ Writing skills | 42.5% - 34 ಅಂಕಗಳು | Supplementary reading | 5% ಅಂಕಗಳು -4 |
| 4 | ಮೆಚ್ಚುಗೆ/ಪ್ರಶಂಸುವಿಕೆ Appreciation | 8.75% - 7 ಅಂಕಗಳು | ಪ್ರಬಂಧ Composition | 18.75% - ಅಂಕಗಳು–15 |
| ಒಟ್ಟು Total | | 80 ಅಂಕಗಳು | ವ್ಯಾಕರಣ Grammar | 10%- ಅಂಕಗಳು–8 |
| | | | ಒಟ್ಟು Total | 80 ಅಂಕಗಳು |

## 1ಡಿ. ಗಣಿತ ವಿಷಯದ ನೀಲನಕಾಶೆ

| ಕ್ರ ಸಂ | ಜ್ಞಾನಗ್ರಹಣ ಮಟ್ಟಕ್ಕೆ ಅಂಕ ಹಂಚಿಕೆ<br>**Weightage to Cognitive levels** | | ಪಠ್ಯವಿಷಯಗಳಿಗೆ ಅಂಕ ಹಂಚಿಕೆ<br>**Weightage to Content Type** | |
|---|---|---|---|---|
| 1 | ಸ್ಮರಣೆ<br>Remembering | 10%-<br>8 ಅಂಕಗಳು | ಸಂಖ್ಯಾ ಪದ್ಧತಿ<br>Number system | 4 ಅಂಕಗಳು |
| 2 | ತಿಳಿವಳಿಕೆ<br>Understanding | 55%-<br>44 ಅಂಕಗಳು | ಬೀಜಗಣಿತೆ<br>Algebra | 26 ಅಂಕಗಳು |
| 3 | ಅನ್ವಯ<br>Application<br>ಬರವಣಿಗೆಕೌಶಲ್ಯ<br>Writing skills | 20% -<br>16 ಅಂಕಗಳು | ತ್ರಿಕೋನಮಿತಿ<br>Trigonometry | 9 ಅಂಕಗಳು |
| 4 | ಕೌಶಲ್ಯ<br>Mathematics Skills | 15% -<br>12 ಅಂಕಗಳು | ನಿರ್ದೇಶಾಂಕರೇಖಾಗಣಿತ<br>Coordinate Geometry | 5 ಅಂಕಗಳು |
| | ಒಟ್ಟು<br>Total | 80 ಅಂಕಗಳು | ಸಂಖ್ಯಾ ಶಾಸ್ತ್ರ ಮತ್ತು ಸಂಭವನೀಯತೆ Statistics and Probability | 9 ಅಂಕಗಳು |
| | | | ರೇಖಾ ಗಣಿತ Geometry | 17 ಅಂಕಗಳು |
| | | | ಕ್ಷೇತ್ರ ಗಣಿತ<br>Surface Areas & Volumes | 10 ಅಂಕಗಳು |
| | | | ಒಟ್ಟು Total | 80 ಅಂಕಗಳು |

## 1ಇ. ವಿಜ್ಞಾನ ವಿಷಯದ ನೀಲನಕಾಶೆ

| ಕ್ರ ಸಂ | ಜ್ಞಾನಗ್ರಹಣ ಮಟ್ಟಕ್ಕೆ ಅಂಕ ಹಂಚಿಕೆ<br>**Weightage to Cognitive levels** | | ಪಠ್ಯವಿಷಯಗಳಿಗೆ ಅಂಕ ಹಂಚಿಕೆ<br>**Weightage to Content Type** | |
|---|---|---|---|---|
| 1 | ಸ್ಮರಣೆ<br>Remembering | 20%-<br>16 ಅಂಕಗಳು | Materials | 25 ಅಂಕಗಳು |
| 2 | ತಿಳಿವಳಿಕೆ<br>Understanding | 40%-<br>32 ಅಂಕಗಳು | World of Living | 22 ಅಂಕಗಳು |
| 3 | ಅನ್ವಯ<br>Application<br>ಬರವಣಿಗೆಕೌಶಲ್ಯ<br>Writing skills | 20% -<br>16 ಅಂಕಗಳು | Natural Phenomena | 12 ಅಂಕಗಳು |
| 4 | ಕೌಶಲ್ಯ<br>Science Skills | 20% -<br>16 ಅಂಕಗಳು | How things work | 13 ಅಂಕಗಳು |
| | ಒಟ್ಟುTotal | 80 ಅಂಕಗಳು | Natural resources | 8 ಅಂಕಗಳು |
| | | | ಒಟ್ಟು Total | 80 ಅಂಕಗಳು |

## 1ಎಫ್. ಸಮಾಜವಿಜ್ಞಾನವಿಷಯದ ನೀಲನಕಾಶೆ

| Sl.No. | Weightage to Cognitive levels ಜ್ಞಾನಗ್ರಹಣ ಮಟ್ಟಕ್ಕೆ ಅಂಕ ಹಂಚಿಕೆ | | ಪಠ್ಯವಿಷಯಗಳಿಗೆ ಅಂಕ ಹಂಚಿಕೆ **Weightage to Content Type** | |
|---|---|---|---|---|
| 1 | ಸ್ಮರಣೆ Remembering | 16%- 13 ಅಂಕಗಳು | ಇತಿಹಾಸ History | 25 ಅಂಕಗಳು |
| 2 | ತಿಳಿವಳಿಕೆ Understanding | 50%- 40 ಅಂಕಗಳು | ಭೂಗೋಳ Geography | 22 ಅಂಕಗಳು |
| 3 | ಅನ್ವಯ Application | 28% - 22 ಅಂಕಗಳು | ರಾಜ್ಯ ಶಾಸ್ತ್ರ Political Science | 11 ಅಂಕಗಳು |
| 4 | ಕೌಶಲ್ಯ Other Social Science Skills | 6% - 5 ಅಂಕಗಳು | ಸಮಾಜ ಶಾಸ್ತ್ರ Sociology | 8 ಅಂಕಗಳು |
| | | | ವ್ಯವಹಾರಅಧ್ಯಯನ Business Studies | 7 ಅಂಕಗಳು |
| | | | ಅರ್ಥಶಾಸ್ತ್ರ Economics | 7 ಅಂಕಗಳು |
| ಒಟ್ಟುTotal | | 80 ಅಂಕಗಳು | ಒಟ್ಟುTotal | 80 ಅಂಕಗಳು |

## II. ವಿಷಯವಾರು ಪ್ರಶ್ನೆಪತ್ರಿಕೆ ಹಾಗೂ ಅಂಕಗಳ ಹಂಚಿಕೆ ಸ್ವರೂಪದ ಕೋಷ್ಟಕ:

### 2ಎ. ಪ್ರಥಮ ಭಾಷೆ ಪ್ರಶ್ನೆಪತ್ರಿಕೆ ಹಾಗೂ ಅಂಕಗಳ ಹಂಚಿಕೆ ಸ್ವರೂಪದ ಕೋಷ್ಟಕ

| ಕ್ರ ಸಂ | ವಿವಿಧ ಪ್ರಶ್ನೆಗಳ ಸ್ವರೂಪ | ಹಿಂದಿನ ವರ್ಷಗಳಲ್ಲಿ | | ಪ್ರಸ್ತಾಪಿಸಿರುವ ಪದ್ಧತಿಯಲ್ಲಿ | | ಷರಾ |
|---|---|---|---|---|---|---|
| | | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | |
| 1 | ಬಹು ಆಯ್ಕೆ ಪ್ರಶ್ನೆಗಳು (ಒಂದು ಅಂಕದ ಪ್ರಶ್ನೆಗಳು) | 14 | 14 | 06 | 06 | |
| 2 | ಅ) ಸಂಬಂಧೀಕರಿಸಿ ಬರೆಯುವುದು<br>ಆ) ಒಂದು ವಾಕ್ಯದಲ್ಲಿ ಉತ್ತರಿಸುವುದು (ಒಂದು ಅಂಕದ ಪ್ರಶ್ನೆಗಳು) | –<br>09 | –<br>09 | 04<br>07 | 04<br>07 | |
| 3 | ಕಿರು ಉತ್ತರದ ಪ್ರಶ್ನೆಗಳು (ಎರಡು ಅಂಕದ ಪ್ರಶ್ನೆಗಳು) | 10 | 20 | 10 | 20 | |
| 4 | ದೀರ್ಘ ಉತ್ತರದ ಪ್ರಶ್ನೆಗಳು (ಮೂರು ಅಂಕದ ಪ್ರಶ್ನೆಗಳು) | 09 | 27 | 11 | 33 | |
| 5 | ದೀರ್ಘ ಉತ್ತರದ ಪ್ರಶ್ನೆಗಳು (ನಾಲ್ಕು ಅಂಕದ ಪ್ರಶ್ನೆಗಳು) | 05 | 20 | 05 | 20 | |
| 6 | ದೀರ್ಘ ಉತ್ತರದ ಪ್ರಶ್ನೆಗಳು (ಐದು ಅಂಕದ ಪ್ರಶ್ನೆಗಳು) | 02 | 10 | 02 | 10 | |
| | | **49** | **100** | **45** | **100** | |

## 2ಬಿ. ದ್ವಿತೀಯ ಭಾಷೆ ಪ್ರಶ್ನೆಪತ್ರಿಕೆ ಹಾಗೂ ಅಂಕಗಳ ಹಂಚಿಕೆ ಸ್ವರೂಪದ ಕೋಷ್ಟಕ

| ಕ್ರ ಸಂ | ವಿವಿಧ ಪ್ರಶ್ನೆಗಳ ಸ್ವರೂಪ | ಹಿಂದಿನ ವರ್ಷಗಳಲ್ಲಿ | | ಪ್ರಸ್ತಾಪಿಸಿರುವ ಪದ್ಧತಿಯಲ್ಲಿ | | |
|---|---|---|---|---|---|---|
| | | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | |
| 1 | ಬಹು ಆಯ್ಕೆ ಪ್ರಶ್ನೆಗಳು (ಒಂದು ಅಂಕದ ಪ್ರಶ್ನೆಗಳು) | 08 | 08 | 04 | 04 | |
| 2 | ಅತಿ ಕಿರು ಉತ್ತರದ ಪ್ರಶ್ನೆಗಳು (ಒಂದು ಅಂಕದ ಪ್ರಶ್ನೆಗಳು) | 16 | 16 | 12 | 12 | |
| 3 | ಕಿರು ಉತ್ತರದ ಪ್ರಶ್ನೆಗಳು (ಎರಡು ಅಂಕದ ಪ್ರಶ್ನೆಗಳು) | 12 | 24 | 08 | 16 | |
| 4 | ದೀರ್ಘ ಉತ್ತರದ ಪ್ರಶ್ನೆಗಳು (ಮೂರು ಅಂಕದ ಪ್ರಶ್ನೆಗಳು) | 04 | 12 | 09 | 27 | |
| 5 | ದೀರ್ಘ ಉತ್ತರದ ಪ್ರಶ್ನೆಗಳು (ನಾಲ್ಕು ಅಂಕದ ಪ್ರಶ್ನೆಗಳು) | 05 | 20 | 04 | 16 | |
| 6 | ದೀರ್ಘ ಉತ್ತರದ ಪ್ರಶ್ನೆಗಳು (ಐದುಅಂಕದ ಪ್ರಶ್ನೆಗಳು) | – | – | 01 | 05 | |
| | | **45** | **80** | **38** | **80** | |

## 2ಸಿ. ತೃತೀಯ ಭಾಷೆ ಪ್ರಶ್ನೆಪತ್ರಿಕೆ ಹಾಗೂ ಅಂಕಗಳ ಹಂಚಿಕೆ ಸ್ವರೂಪದ ಕೋಷ್ಟಕ

| ಕ್ರ ಸಂ | ವಿವಿಧ ಪ್ರಶ್ನೆಗಳ ಸ್ವರೂಪ | ಹಿಂದಿನ ವರ್ಷಗಳಲ್ಲಿ | | ಪ್ರಸ್ತಾಪಿಸಿರುವ ಪದ್ಧತಿಯಲ್ಲಿ | | ಷರಾ |
|---|---|---|---|---|---|---|
| | | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | |
| 1 | ಬಹು ಆಯ್ಕೆ ಪ್ರಶ್ನೆಗಳು (ಒಂದು ಅಂಕದ ಪ್ರಶ್ನೆಗಳು) | 08 | 08 | 08 | 08 | |
| | ಅ) ಹೊಂದಿಸಿ ಬರೆಯಿರಿ | 04 | 04 | – | – | |
| | ಆ) ಸಂಬಂಧೀಕರಿಸಿ ಬರೆಯುವುದು | 04 | 04 | 04 | 04 | |
| 2 | ಅತಿ ಕಿರು ಉತ್ತರದ ಪ್ರಶ್ನೆಗಳು (ಒಂದು ಅಂಕದ ಪ್ರಶ್ನೆಗಳು) | 06 | 06 | 04 | 04 | |
| | ಅ) ಅಪಠಿತ ಗದ್ಯಭಾಗ | 04 | 04 | 02 | 04 | |
| | ಆ) ಅನುವಾದ | 04 | 04 | 01 | 03 | |
| 3 | ಕಿರು ಉತ್ತರದ ಪ್ರಶ್ನೆಗಳು (ಎರಡು ಅಂಕದ ಪ್ರಶ್ನೆಗಳು) | 11 | 22 | 06 | 12 | |
| 4 | ದೀರ್ಘ ಉತ್ತರದ ಪ್ರಶ್ನೆಗಳು (ಮೂರು ಅಂಕದ ಪ್ರಶ್ನೆಗಳು) | 04 | 12 | 08 | 24 | |
| 5 | ದೀರ್ಘ ಉತ್ತರದ ಪ್ರಶ್ನೆಗಳು (ನಾಲ್ಕು ಅಂಕದ ಪ್ರಶ್ನೆಗಳು) | 04 | 16 | 04 | 16 | |
| 6 | ದೀರ್ಘ ಉತ್ತರದ ಪ್ರಶ್ನೆಗಳು (ಐದು ಅಂಕದ ಪ್ರಶ್ನೆಗಳು) | – | – | 01 | 05 | |
| | | **49** | **80** | **38** | **80** | |

## 2ಡಿ. ಗಣಿತ ಪ್ರಶ್ನೆಪತ್ರಿಕೆ ಹಾಗೂ ಅಂಕಗಳ ಹಂಚಿಕೆ ಸ್ವರೂಪದ ಕೋಷ್ಟಕ

| ಕ್ರ ಸಂ | ವಿವಿಧ ಪ್ರಶ್ನೆಗಳ ಸ್ವರೂಪ | ಹಿಂದಿನ ವರ್ಷಗಳಲ್ಲಿ | | ಪ್ರಸ್ತಾಪಿಸಿರುವ ಪದ್ಧತಿಯಲ್ಲಿ | | ಷರಾ |
|---|---|---|---|---|---|---|
| | | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | |
| 1 | ಬಹು ಆಯ್ಕೆ ಪ್ರಶ್ನೆಗಳು (ಒಂದುಅಂಕದ ಪ್ರಶ್ನೆಗಳು) | 08 | 08 | 08 | 08 | |
| 2 | ಅತಿಕಿರುಉತ್ತರದ ಪ್ರಶ್ನೆಗಳು (ಒಂದುಅಂಕದ ಪ್ರಶ್ನೆಗಳು) | 06 | 06 | 08 | 08 | |
| 3 | ಕಿರುಉತ್ತರದ ಪ್ರಶ್ನೆಗಳು (ಎರಡುಅಂಕದ ಪ್ರಶ್ನೆಗಳು) | 16 | 32 | 08 | 16 | |
| 4 | ದೀರ್ಘಉತ್ತರದ ಪ್ರಶ್ನೆಗಳು (ಮೂರುಅಂಕದ ಪ್ರಶ್ನೆಗಳು) | 06 | 18 | 09 | 27 | |
| 5 | ದೀರ್ಘಉತ್ತರದ ಪ್ರಶ್ನೆಗಳು (ನಾಲ್ಕು ಅಂಕದ ಪ್ರಶ್ನೆಗಳು) | 04 | 16 | 04 | 16 | |
| 6 | ದೀರ್ಘಉತ್ತರದ ಪ್ರಶ್ನೆಗಳು (ಐದುಅಂಕದ ಪ್ರಶ್ನೆಗಳು) | – | – | 01 | 05 | |
| | | **40** | **80** | **38** | **80** | |

## 2ಇ. ವಿಜ್ಞಾನ ಪ್ರಶ್ನೆಪತ್ರಿಕೆ ಹಾಗೂ ಅಂಕಗಳ ಹಂಚಿಕೆ ಸ್ವರೂಪದ ಕೋಷ್ಟಕ

| ಕ್ರ ಸಂ | ವಿವಿಧ ಪ್ರಶ್ನೆಗಳ ಸ್ವರೂಪ | ಹಿಂದಿನ ವರ್ಷಗಳಲ್ಲಿ | | ಪ್ರಸ್ತಾಪಿಸಿರುವ ಪದ್ಧತಿಯಲ್ಲಿ | | ಷರಾ |
|---|---|---|---|---|---|---|
| | | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | |
| 1 | ಬಹು ಆಯ್ಕೆ ಪ್ರಶ್ನೆಗಳು (ಒಂದುಅಂಕದ ಪ್ರಶ್ನೆಗಳು) | 10 | 10 | 08 | 08 | |
| 2 | ಅತಿಕಿರುಉತ್ತರದ ಪ್ರಶ್ನೆಗಳು (ಒಂದುಅಂಕದ ಪ್ರಶ್ನೆಗಳು) | 07 | 07 | 08 | 08 | |
| 3 | ಹೊಂದಿಸಿ ಬರೆಯಿರಿ | 04 | 04 | – | – | |
| 4 | ಕಿರುಉತ್ತರದ ಪ್ರಶ್ನೆಗಳು (ಎರಡುಅಂಕದ ಪ್ರಶ್ನೆಗಳು) | 16 | 32 | 08 | 16 | |
| 5 | ದೀರ್ಘಉತ್ತರದ ಪ್ರಶ್ನೆಗಳು (ಮೂರುಅಂಕದ ಪ್ರಶ್ನೆಗಳು) | 05 | 15 | 09 | 27 | |
| 6 | ದೀರ್ಘಉತ್ತರದ ಪ್ರಶ್ನೆಗಳು (ನಾಲ್ಕು ಅಂಕದ ಪ್ರಶ್ನೆಗಳು) | 03 | 12 | 04 | 16 | |
| 7 | ದೀರ್ಘಉತ್ತರದ ಪ್ರಶ್ನೆಗಳು (ಐದುಅಂಕದ ಪ್ರಶ್ನೆಗಳು) | – | – | 01 | 05 | |
| | | **42** | **80** | **38** | **80** | |

## 2ಡಿ. ಸಮಾಜ ವಿಜ್ಞಾನ ಪ್ರಶ್ನೆಪತ್ರಿಕೆ ಹಾಗೂ ಅಂಕಗಳ ಹಂಚಿಕೆ ಸ್ವರೂಪದ ಕೋಷ್ಟಕ

| ಕ್ರ ಸಂ | ವಿವಿಧ ಪ್ರಶ್ನೆಗಳ ಸ್ವರೂಪ | ಹಿಂದಿನ ವರ್ಷಗಳಲ್ಲಿ | | ಪ್ರಸ್ತಾಪಿಸಿರುವ ಪದ್ಧತಿಯಲ್ಲಿ | | ಷರಾ |
|---|---|---|---|---|---|---|
| | | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | ಪ್ರಶ್ನೆಗಳ ಸಂಖ್ಯೆ | ಪ್ರಶ್ನೆಗಳ ಸಂಖ್ಯೆವಾರು ಅಂಕಗಳು | |
| 1 | ಬಹು ಆಯ್ಕೆ ಪ್ರಶ್ನೆಗಳು (ಒಂದುಅಂಕದ ಪ್ರಶ್ನೆಗಳು) | 10 | 10 | 08 | 08 | |
| 2 | ಅತಿಕಿರುಉತ್ತರದ ಪ್ರಶ್ನೆಗಳು (ಒಂದುಅಂಕದ ಪ್ರಶ್ನೆಗಳು) | 14 | 14 | 08 | 08 | |
| 3 | ಕಿರುಉತ್ತರದ ಪ್ರಶ್ನೆಗಳು (ಎರಡುಅಂಕದ ಪ್ರಶ್ನೆಗಳು) | 15 | 30 | 08 | 16 | |
| 4 | ದೀರ್ಘಉತ್ತರದ ಪ್ರಶ್ನೆಗಳು (ಮೂರುಅಂಕದ ಪ್ರಶ್ನೆಗಳು) | 06 | 18 | 09 | 27 | |
| 5 | ದೀರ್ಘಉತ್ತರದ ಪ್ರಶ್ನೆಗಳು (ನಾಲ್ಕು ಅಂಕದ ಪ್ರಶ್ನೆಗಳು) | 02 | 08 | 04 | 16 | |
| 6 | ದೀರ್ಘಉತ್ತರದ ಪ್ರಶ್ನೆಗಳು (ಐದುಅಂಕದ ಪ್ರಶ್ನೆಗಳು) | – | – | 01 | 05 | |
| | | **47** | **80** | **38** | **80** | |

**ಪ್ರಸ್ತುತ ಪ್ರಸ್ತಾಪಿಸಲ್ಪಟ್ಟಿರುವ ಪ್ರಶ್ನೆಪತ್ರಿಕೆಯ ಸ್ವರೂಪದಿಂದ ಆಗುವ ಪ್ರಯೋಜನಗಳು:**

ಒಟ್ಟಾರೆ ಪ್ರಶ್ನೆಪತ್ರಿಕೆಯಲ್ಲಿನ 40 ಪ್ರಶ್ನೆಗಳ ಬದಲಾಗಿ 38 ಪ್ರಶ್ನೆಗಳಿರುತ್ತದೆಯೇ ಹೊರತು ಹೆಚ್ಚಿನ ಬದಲಾವಣೆ ಏನೂ ಇರುವುದಿಲ್ಲ. ಕಳೆದ ವರ್ಷ ನೀಲನಕಾಶೆ (Blue print) ನೀಡಿರುವುದಿಲ್ಲ. ಆದರೆ ಘಟಕವಾರು ಅಂಕಗಳ ಹಂಚಿಕೆ ನೀಡಲಾಗಿತ್ತು. ಇದರಿಂದ ಶಿಕ್ಷಕರು ಕಡಿಮೆ ಅಂಕಗಳ ಹಂಚಿಕೆ (ಅಂದರೆ 1 ಅಂಕ/2 ಅಂಕ) ಇರುವಂತಹ ಪಾಠಗಳನ್ನು ಬೋಧಿಸದೇ ಇರುವಂತಹ ಸಂದರ್ಭಗಳು ಅಧಿಕವಾಗಿರುತ್ತದೆ. ಹಾಗಾಗಿ ಈ ವರ್ಷದಿಂದ ಮುಖ್ಯಾಂಶ ಅಧಾರಿತ / ವಿಷಯಾಧಾರಿತ (Themewise) ಅಂಕಗಳ ಹಂಚಿಕೆಯನ್ನು ನಿಗದಿಪಡಿಸಿದ್ದು, ಈ ಕ್ರಮ ಹೆಚ್ಚು ವೈಜ್ಞಾನಿಕವಾಗಿದ್ದು ಹಾಗೂ ತಾರ್ಕಿಕವಾದದ್ದೂ ಆಗಿದೆ.

- ಇದರಿಂದಾಗಿ ಶಿಕ್ಷಕರು ಎಲ್ಲಾ ಅಧ್ಯಾಯಗಳನ್ನು ಬೋಧನೆ ಮಾಡುವುದು ಕಡ್ಡಾಯವಾಗಿರುತ್ತದೆ.
- ಪ್ರಸ್ತುತ ಪರೀಕ್ಷಾ ಪದ್ಧತಿಯಲ್ಲಿ ಸಾಧಾರಣವಾಗಿ ಕೇಳಿ ಬರುವ ಸಾಮೂಹಿಕ ನಕಲನ್ನು ತಡೆಗಟ್ಟಬಹುದು.
- ಮಕ್ಕಳಲ್ಲಿ ತಾರ್ಕಿಕ ಚಿಂತನೆಯನ್ನು ಮೂಡಿಸಬಹುದು.
- ದೀರ್ಘ ಉತ್ತರದ ಪ್ರಶ್ನೆಗಳಿಂದ ಮಕ್ಕಳಲ್ಲಿ ಬರವಣಿಗೆಯ ಕೌಶಲ್ಯ ಮೂಡಿಸಬಹುದು.
- ಮಕ್ಕಳಲ್ಲಿ ಅಭಿವ್ಯಕ್ತಿ ಕೌಶಲ್ಯ ಬೆಳಸುತ್ತದೆ.
- ಶಿಕ್ಷಕರಲ್ಲಿ ಬೋಧನಾ ನಾವೀನ್ಯತೆ ಬಳಸಿ ಹೊಸ ತಂತ್ರಜ್ಞಾನ ಬಳಸುವ ಅರಿವು ಮೂಡಿಸುತ್ತದೆ.

**ಪ್ರಶ್ನೆ ಪ್ರತಿಕೆಯ ಸ್ವರೂಪ:**

- ಬಹು ಆಯ್ಕೆಯ ಪ್ರಶ್ನೆಗಳ ಸಂಖ್ಯೆಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ.
- ಒಂದು ಅಂಕದ ಪ್ರಶ್ನೆಗಳ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ
- ಎರಡು ಅಂಕದ ಪ್ರಶ್ನೆಗಳ ಸಂಖ್ಯೆಯನ್ನು 16 ರಿಂದ 8ಕ್ಕೆ ಕಡಿಮೆ ಮಾಡಲಾಗಿದೆ.
- ಮೂರು ಅಂಕದ ಪ್ರಶ್ನೆಗಳ ಸಂಖ್ಯೆಯನ್ನು 6 ರಿಂದ 9ಕ್ಕೆ ಹೆಚ್ಚು ಮಾಡಲಾಗಿದೆ.
- ಹೊಸದಾಗಿ 5 ಅಂಕದ ಪ್ರಶ್ನೆ ಒಂದನ್ನು ಸೇರಿಸಲಾಗಿದೆ.
- **ಕಠಿಣತೆಯ ಮಟ್ಟದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.**

2017-18, 2018-19 ಹಾಗೂ ಹಿಂದಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ವಿಷಯವಾರು ಪರಿಷ್ಕರಿಸಿದ ನೀಲನಕಾಶೆ ಹಾಗೂ ಪ್ರಶ್ನೆಪತ್ರಿಕೆ ಹಾಗೂ ಅಂಕಗಳ ಹಂಚಿಕೆ ಸ್ವರೂಪದ ಕೋಷ್ಟಕವನ್ನು ಅನುಸರಿಸತಕ್ಕದ್ದು.

**ಆಯುಕ್ತರು ಹಾಗೂ ಅಧ್ಯಕ್ಷರು,**
**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ**
**ಸಾರ್ವಜನಿಕ ಶಿಕ್ಷಣ ಇಲಾಖೆ,**

ಪ್ರತಿಗಳನ್ನು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
2. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
5. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ / ಪ್ರೌಢ ಶಿಕ್ಷಣ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪಠ್ಯಪುಸ್ತಕ ಸಂಘ, ಬೆಂಗಳೂರು.
7. ಜಂಟಿ ನಿರ್ದೇಶಕರುಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗ ಹಾಗೂ ಜಂಟಿ ನಿರ್ದೇಶಕರು (ಆಡಳಿತ ಮತ್ತು ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
8. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ), ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ.
9. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಇವರ ಮೂಲಕ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ, ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ನೀಡಲು ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ.